**ದಿ: 21-07-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು : ವಾದಿ ಪರ ವಕೀಲರಿಂದ**

ಲಿಖಿತ ಹೇಳಿಕೆ ತಯಾರಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸುಮಾರು 28-29ವರ್ಷಗಳ ಹಿಂದೆ ನಾವು ಕೇರಳದಿಂದ ಕರ್ನಾಟಕಕ್ಕೆ ಬಂದು ನೆಲೆಸಿರುತ್ತೇವೆ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ, ಆದರೆ ಕನ್ನಡವನ್ನು ಸುಮಾರಾಗಿ ವ್ಯವಹರಿಸುವಷ್ಟು ಮಾತನಾಡಲು ಬರುತ್ತದೆ. ನನ್ನ ಗಂಡನಿಗೆ ಸಹ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ನನ್ನ ಗಂಡನಿಗೆ ಕನ್ನಡ ಭಾಷೆ ಮಾತನಾಡಲು ಬರುತ್ತಿತ್ತು.

2) ನಾವು ಈಗ ಸ್ವಾಧೀನವಿರುವ ದಾವಾ ಜಮೀನು ನನ್ನ ಗಂಡನಿಗೆ ಅವರ ತಂದೆಯಿಂದ ಬಂದಿದೆ ಎಂದರೆ ಸರಿ. ನನ್ನ ಗಂಡ ಬದುಕಿದ್ದಾಗ ದಾವಾ ಜಮೀನನ್ನು ಅಡವಿಟ್ಟು ಬ್ಯಾಂಕಿನಿಂದ ಸಾಲ ಪಡೆದಿದ್ದರು ಎಂದರೆ ಸರಿ. ನನ್ನ ಗಂಡ ಮರಣ ಹೊಂದಿದ ನಂತರ ನಾನು ಸಹ ದಾವಾ ಆಸ್ತಿಯನ್ನು Fedral bank ನಲ್ಲಿ ಅಡಮಾನ ಮಾಡಿ ಸಾಲ ಪಡೆದಿದ್ದೇನೆ ಎಂದರೆ ಸರಿ. ನನ್ನ ಗಂಡ ಮರಣ ಹೊಂದಿದ ನಂತರ ದಾವಾ ಜಮೀನಿನ ದಾಖಲೆಗಳು ನನ್ನ ಹೆಸರಿಗೆ ಬದಲಾವಣೆಯಾದವು ಎಂದರೆ ಸರಿ. ನನ್ನ ಮಾವನಾದ Ousaph Abraham ಅವರು ಬರೆದುಕೊಟ್ಟ ಜಿ.ಪಿ.ಎ ಆಧಾರದ ಮೇಲೆ ವಾದಿ ಯಾದ ವಿಜಿ ಪೌಲ್ ನನ್ನ ಗಂಡನ ಪರವಾಗಿ settlement deed ಬರೆದುಕೊಟ್ಟಿದ್ದ ಎಂದರೆ ಸರಿ.

3) ವಾದಿಯಾದ ತಂದೆಯಾದ ಇ.ಎಂ.ಪೌಲೋಸ್ ನಾನು ನೋಡಿರುತ್ತೇನೆ. ವಾದಿಯ ತಂದೆಯು ಅವರ ಆಸ್ತಿಗಳನ್ನು ನೋಡಿಕೊಳ್ಳಲು ವಾದಿ ಪರವಾಗಿ ಜಿ.ಪಿ.ಎ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಸಹ ನಾನು ಸಾಲ ಮಾಡಿದ್ದ Fedral bank ನಲ್ಲಿ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನ್ಯಾಯಾಲಯಕ್ಕೆ ಹಾಜರು ಮಾಡಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿಯ ತಂದೆ ಮರಣ ಹೊಂದಿದ್ದಾರೆ ಎಂದರೆ ಸರಿ.

4) ಪ್ರಶ್ನೆ : ಯಾವುದಾದರೂ ದಾಖಲೆಗೆ ಸಹಿ ಮಾಡುವ ಸಂದರ್ಭದಲ್ಲಿ ಅದರ ಒಕ್ಕಣೆಯನ್ನು ಓದದೇ ಸಹಿ ಮಾಡುತ್ತೀರಾ ?

ಉತ್ತರ : ನಂಬಿಕೆ ಇದ್ದರೆ ಓದದೇ ಸಹಿ ಮಾಡುತ್ತೇನೆ.

5) ವಾದಿಯು ನನಗೆ ಹಣ ಕೊಡದೇ ಮೋಸ ಮಾಡಿದ್ದಾನೆ ಎಂದು ಪೊಲೀಸರಿಗೆ ನಾನು ದೂರು ನೀಡಿಲ್ಲ. ನನ್ನ ಗಂಡ ಮರಣ ಹೊಂದಿದ ನಂತರ ದಾವಾ ಜಮೀನಿನ ಖಾತೆಯ ವರ್ಗಾವಣೆಯನ್ನು ಗ್ರಾಮ ಲೆಕ್ಕಾಧಿಕಾರಿ ಮಾಡಿರುತ್ತಾರೆ. ನಾನು ಮಾಡಿದ ಸಾಲ ಮರುಪಾವತಿ ಮಾಡಿದ ನಂತರ ಪಹಣಿ ಪತ್ರಿಕೆಯಲ್ಲಿ ಇದ್ದ ಋಣಭಾರವನ್ನು ತೆಗಿಸಲು ಉಪನೊಂದಾವಣಾಧಿಕಾರಿಗಳ ಕಚೇರಿಗೆ ಹೋಗಿರುತ್ತೇನೆ. ನಾನು ಮಾಡಿದ ಸಾಲವನ್ನು ವಾದಿಯಿಂದ ಹಣ ಪಡೆದು ಮರುಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಾದ 2ನೇ ಪ್ರತಿವಾದಿ ಡಾಂ ಜೊಯಿಯನು ಮನಶಾಸ್ತ್ರದಲ್ಲಿ Ph.D ಮಾಡಿರುತ್ತಾನೆ. ನನ್ನ ಇನ್ನೊಬ್ಬ ಮಗನಾದ 3ನೇ ಪ್ರತಿವಾದಿ ಹಡಗಿನಲ್ಲಿ ಕೆಲಸ ಮಾಡುತ್ತಾನೆ. ನನ್ನ ಮಗಳಾದ 4ನೇ ಪ್ರತಿವಾದಿ ವಕೀಲ ವೃತ್ತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ಆದರೆ ಆಕೆಯು LL.M ಪದವಿಯನ್ನು ವ್ಯಾಸಾಂಗ ಮಾಡುತ್ತಿದ್ದಾಳೆ. ನನ್ನ ಮಕ್ಕಳಾದ 2 ರಿಂದ 4ನೇ ಪ್ರತಿವಾದಿಗಳಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ.

6) ಕುಂದಾಪುರದ Fedral Bank ನ ಅಂದಿನ ವ್ಯವಸ್ಥಾಪಕರು ನನಗೆ ಯಾವುದೇ ಮೋಸ ಮಾಡಿರುವುದಿಲ್ಲ. ದಿನಾಂಕ 18-03-2021ರ ಸಮಯದಲ್ಲಿ ನಾನು Fedral Bank ಗೆ ಸುಮಾರು 28 ಲಕ್ಷದಷ್ಟು ಹಣವನ್ನು ಸಾಲ ಕಟ್ಟಬೇಕಾಗಿತ್ತು ಎಂದರೆ ಸರಿ. ಸದರಿ ಸಾಲವನ್ನು ನಾನು OTS scheme ನಡಿ ರೂ.15,50,000/- ರಾಜಿ ಮಾಡಿಕೊಂಡು ಪಾವತಿ ಮಾಡಲಾಗಿದೆ ಎಂದರೆ ಸರಿ. ಸದರಿ ಬ್ಯಾಂಕಿನ ನನ್ನ ಸಾಲದ ಖಾತೆಯ ಸ್ಟೇಟ್ಮೆಂಟ್ ಮತ್ತು ಇತರೆ ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇಲ್ಲ. OTS scheme ನಡಿ ಪಾವತಿ ಮಾಡಿದ ಹಣವನ್ನು ವಾದಿ ನನಗೆ ನೀಡಿದ್ದಾನೆ ಎಂದರೆ

ಸರಿಯಲ್ಲ. ವಾದಿಯಿಂದ ಪಡೆದ ಹಣವನ್ನು ನಾನು ಬ್ಯಾಂಕಿಗೆ ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ವಾದಿ ರೂ.20,00,000/- ಕೃಷಿ ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ.

7) ನಾನು ವಾದಿಯಿಂದ ರೂ.16,00,000/- ಹಣವನ್ನು ಪಡೆದಿದ್ದೇನೆ ಮತ್ತು ಅದರ ಮರುಪಾವತಿಯ ಖಾತ್ರಿಗಾಗಿ ವಾದಿ ಪರವಾಗಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಡಮಾನ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

8) ವಾದಿಯ ತಂದೆ ಸ್ವಲ್ಪ ಸಮಯ ಕರ್ನಾಟಕದಲ್ಲಿ ಮತ್ತು ಸ್ವಲ್ಪ ಸಮಯ ಕೇರಳದಲ್ಲಿ ಇರುತ್ತಿದ್ದರು. ವಾದಿಯ ತಂದೆ ಸುಮಾರು 2 – 3 ವರ್ಷದ ಹಿಂದೆ ಮರಣಹೊಂದಿರುತ್ತಾರೆ. ತನ್ನ ಖಾತೆಯನ್ನು ನಿರ್ವಹಿಸಲು ವಾದಿಯ ತಂದೆಯು ವಾದಿಗೆ ಜಿ.ಪಿ.ಎ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ತನ್ನ ತಂದೆಯ ಆಸ್ತಿಯನ್ನು Fedral Bank ನಲ್ಲಿ ಅಡಮಾನ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ.

9) ನಮ್ಮ ಜಮೀನಿಗೆ ಹೋಗುವ ರಸ್ತೆಗೆ ಸಂಬಂಧಿಸಿದಂತೆ ಒಂದು ವಿವಾದ ಇತ್ತು ಎಂದರೆ ಸರಿ. ಸದರಿ ವಿವಾದಕ್ಕೆ ಸಂಬಂಧಿಸಿದಂತೆ ನಾನು ಬೀನಾ ಜೋಸೆಫ್ ವಕೀಲರ ಕಚೇರಿಗೆ ಹೋಗುತ್ತಿದ್ದೆ ಎಂದರೆ ಸರಿ. ನಿ.ಪಿ-1 ಅಡಮಾನ ಪತ್ರವನ್ನು ಸದರಿ ಬೀನಾ ಜೋಸೆಫ್ ವಕೀಲರು ಬರೆದಿದ್ದಾರೆ ಎಂದರೆ ಸಾಕ್ಷಿಯು ನಾನು ಸದರಿ ವಕೀಲರ ಬಳಿ ಹೋಗಿಲ್ಲ ಎಂದು ಹೇಳುತ್ತಾರೆ.

10) ವಾದಿಯು ನನಗೆ ಮತ್ತು ಇತರೇ ಪ್ರತಿವಾದಿಗಳಿಗೆ ವಕೀಲರ ಮುಖಾಂತರ ನೋಟೀಸ್ ಕಳುಹಿಸಿದ್ದ ಎಂದರೆ ಸರಿ. ಸದರಿ ನೋಟೀಸ್ ನನಗೆ ಜಾರಿಯಾಗಿದೆ ಎಂದರೆ ಸರಿ. ವಾದಿಯಿಂದ ಹಣ ಪಡೆದು ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದರು ಸಹ ವಾದಿ ನಮಗೆ ಪಹಣಿ ಪತ್ರಿಕೆಯ

ಋಣಭಾರವನ್ನು ತೆಗೆಸಲು ಹೋಗಿ ದಾಖಲೆ ನೊಂದಣಿ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11) ಅಂಪಾರಿನ ನರಸಿಂಹ ಪೂಜಾರಿಯ ಹೆಂಡತಿಯಾದ ಪಾರ್ವತಿ ಎನ್ನುವವರು ನನಗೆ ಗೊತ್ತು. ಸಹಿ ಮಾಡಲು ಅವರನ್ನು ನಾನೇ ಕರೆದಿದ್ದೆ. ಸದರಿ ಪಾರ್ವತಿ ಸಹಿ ಮಾಡಿದ್ದಾಳೆ ಎಂದರೆ ಸರಿ. ದಾಖಲೆ ನೊಂದಣಿಯಾಗುವ ದಿನ ನನ್ನ ಮಕ್ಕಳಾದ 2 ರಿಂದ 4ನೇ ಪ್ರತಿವಾದಿಗಳು ಉಪನೊಂದಾಣಿಧಿಕಾರಿಗಳ ಕಚೇರಿಗೆ ಬಂದಿದ್ದರು ಎಂದರೆ ಸರಿ. ವಾದಿ ನಮಗೆ ಹಣವನ್ನು ರೂ.15,70,000/- ಮತ್ತು ರೂ.30,000/- ಮೊತ್ತದ ಎರಡು ಚೆಕ್ ಗಳ ಮುಖಾಂತರ ಪಾವತಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಹಣದಿಂದ ನಾನು ಸಾಲ ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಮಕ್ಕಳಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಂದರೂ ಸಹ ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಮಗೆ ಮೋಸ ಮಾಡಿಲ್ಲ ಮತ್ತು ನಾವೇ ವಾದಿಗೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಮೊತ್ತವನ್ನು ಬಡ್ಡಿ ಸಮೇತ ಪಾವತಿಸಲು ನಾವು ಜವಾಬ್ದಾರರು ಎಂದರೆ ಸರಿಯಲ್ಲ. ಆದರೂ ಸಹ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>** : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**